**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 32/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.06**

**ದಿನಾಂಕಃ 20.11.2025** **ಸಿಡಬ್ಲ್ಯೂ.08**

| | |
|---|---|
| ಹೆಸರು | ಎಸ್ ಗೋವಿಂದ |
| ತಂದೆ ಹೆಸರು | ಶ್ರೀರಾಮುಲು |
| ವಯಸ್ಸು | 34 ವರ್ಷ |
| ಉದ್ಯೋಗ | ಆಟೋ ಚಾಲಕ |
| ವಾಸ ಸ್ಥಳ | ಹರಿಹರ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ. 1 ಮತ್ತು 7 ರವರ ಪರಿಚಯವಿಲ್ಲ. 1 ನೇ ಆರೋಪಿ ಪರಿಚಯವಿಲ್ಲ. ಈಗ ನ್ಯಾಯಾಲಯದಲ್ಲಿ ಆರೋಪಿಯನ್ನು ನಾನು ಈ ಮೊದಲು ನೋಡಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು ಅದು ಆರೋಪಿ ತೋರಿಸಿದ ಸ್ಥಳ ಪಂಚನಾಮೆ ಆಗಿದ್ದು ಅದನ್ನು ನಿಪಿ.9 ಎಂದು ಸಾಕ್ಷಿಯ ಸಹಿಯನ್ನು ನಿಪಿ.9 (ಎ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಈಗೆ 3 ವರ್ಷಗಳ ಹಿಂದೆ ಕೊಂಡಜ್ಜಿ ಗ್ರಾಮದ ಶಾಲೆಯಲ್ಲಿ ಮಾಡಿರುತ್ತೇನೆ. ಯಾವ ಕಾರಣಕ್ಕೆ ಸಹಿ ಮಾಡಿದ್ದೇನೆ ಎಂದು ಗೊತ್ತಿಲ್ಲ. ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ. ಪಂಚನಾಮೆ ಕಾಲಕ್ಕೆ ನನ್ನೊಂದಿಗೆ ಪೊಲೀಸರು ಇದ್ದರು. ಮತ್ತೆ ಯಾರಿದ್ದರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ಛಾಯ ಚಿತ್ರ ತೋರಿಸಲಾಗಿ ಅದರಲ್ಲಿ ತಾನು ಇರುವುದಾಗಿ ಒಪ್ಪಿದ್ದು ಅದನ್ನು ನಿಪಿ.10 ಎಂದು ಗುರುತಿಸಲಾಯಿತು. ನಿಪಿ.10 ನ್ನು ಕೊಂಡಜ್ಜಿ ಗ್ರಾಮದ ಶಾಲೆಯಲ್ಲಿ ತೆಗೆದಿದ್ದಾರೆ. ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಕೊಂಡಜ್ಜಿ ಶಾಲೆಯಲ್ಲಿ ನಾನು ಸಹಿ ಮಾಡಿದಾಗ ಸಮಯ ಮದ್ಯಾಹ್ನ 3.00 ರಿಂದ 4.00 ಗಂಟೆಯಾಗಿತ್ತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ದಿಃ 07.10.2021 ರಂದು ಕೊಂಡಜ್ಜಿ ಶಾಲೆಯಲ್ಲಿ ಈಗ ನ್ಯಾಯಾಲಯದಲ್ಲಿ ಆರೋಪಿ ನಾಗರಾಜ ತಾನು ಕಳುವು ಮಾಡಿದ ಜಾಗೆ ಇದೇ ಎಂದು ತೋರಿಸಿದ್ದು ಪೊಲೀಸರು ನನ್ನ ಹಾಗೂ ಚಾಸಾ 7 ರವರ ಸಮಕ್ಷಮ ನಿಪಿ.9 ರಂತೆ ಪಂಚನಾಮೆ ಜರುಗಿಸಿತ್ತಾರೆ ಎಂದರೆ ಸಾಕ್ಷಿಯು ಕಳ್ಳತನದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಿನ ಈಗ ನ್ಯಾಯಾಲಯದಲ್ಲಿರುವ ಆರೋಪಿ ಸ್ಥಳದಲ್ಲಿ ಇದ್ದರಾ ಎಂದರೆ ಸಾಕ್ಷಿಯು ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಈ ಎಲ್ಲಾ ವಿಚಾರವಾಗಿ ದಿಃ 01.10.2021 ರಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಗುರುತಿಸಲು ನಿರಾಕರಿಸಿದ ಹೇಳಿಕೆಯನ್ನು ನಿಪಿ.11 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ತಿಳಿಸಿದ್ದರೂ ಸಹ ಆರೋಪಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್ ಬಿ ವಕೀಲರಿಂದಃ**

ನಿಪಿ.9 ರಲ್ಲಿ ಬರೆದಿರುವ ಅಂಶಗಳನ್ನು ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಸರಿ. ನಿಪಿ.9 ನ್ನು ಯಾರು ಬೆರಳಚ್ಚು ಪಡಿಸಿರುತ್ತಾರೆ ಎಂದು ಗೊತ್ತಿಲ್ಲ ಎಂದರೆ ಸರಿ. ಶಾಲೆಯ ಬಳಿ ಬರಲು ಪೊಲೀಸರು ನನಗೆ ಯಾವುದೇ ನೋಟಿಸ್ ನೀಡಿಲ್ಲ ಎಂದರೆ ಸರಿ. ನಾನು ಆಟೋ ಚಾಲಕನಾದ್ದರಿಂದ ಪೊಲೀಸರ ಪರಿಚಯವಿದೆ ಎಂದರೆ ಸರಿ. ಪೊಲೀಸರು ನನಗೆ ಪರಿಚಯವಿದ್ದರಿಂದ ಕಾರಣ ನನ್ನನ್ನು ಕರೆದಿದ್ದರಿಂದ ನಾನು ಸ್ಥಳಕ್ಕೆ ಹೋಗಿ ಸಹಿ ಮಾಡಿದ್ದೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ಪೊಲೀಸರ ಪರಿಚಯವಿಲ್ಲ ಎಂದು ನುಡಿಯುತ್ತಾರೆ. ನಿಪಿ. 9 ಕ್ಕೆ ನಾನು ಆಟೋ ನಿಲ್ದಾಣದ ಬಳಿ ಸಹಿ ಮಾಡಿದ್ದೇನೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪೊಲಿಸ್ ಠಾಣೆಯಲ್ಲಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ